**ಓ.ಎಸ್. ನಂಬರಃ 74/2022** **ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 15-10-2025)**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಬಿ. ವಕೀಲರಿಂದ,**

ಮಾವಳ್ಳಿ-II ಗ್ರಾಮದ ಸರ್ವೆ ನಂ. 80 ರಲ್ಲಿ ಎಷ್ಟು ಹಿಸ್ಸೆಗಳು ಇವೆ ಎಂದರೆ, ಸಾಕ್ಷಿಯು ಒಂದು ಹಿಸ್ಸೆ ಮಾತ್ರ ಇದೆ ಎಂದು ಉತ್ತರಿಸಿರುತ್ತಾರೆ. ಮಾವಳ್ಳಿ-II ಗ್ರಾಮದ ಸರ್ವೆ ನಂ. 80 ನನಗೆ ಸೇರಿದ ಆಸ್ತಿಯಾಗಿರುತ್ತದೆ. ಅದೇ ರೀತಿ ಮಾವಳ್ಳಿ-II ಗ್ರಾಮದ ಸರ್ವೆ ನಂ. 80/1 ಸಹ ನನಗೆ ಸೇರಿದ್ದಾಗಿರುತ್ತದೆ. ಸರ್ವೆ ನಂ. 80 ರಲ್ಲಿ ಒಟ್ಟೂ 8 ಗುಂಟೆ ಇರುತ್ತದೆ. ಅದರಲ್ಲಿ ಎಷ್ಟು ಖರಾಬ ಇರುತ್ತದೆ ಎಂದು ಗೊತ್ತಿಲ್ಲ. ಸರ್ವೆ ನಂ. 80/1 ರಲ್ಲಿ 8 ಗುಂಟೆ ಇರುತ್ತದೆ. ಸಾಕ್ಷಿಯು ಮುಂದುವರೆದು, ಅವೆರಡೂ ಸರ್ವೆ ನಂ. ಗಳು ಒಂದೇ ಆಗಿರುತ್ತದೆ ಎಂದು ಹೇಳಿರುತ್ತಾರೆ. ಸರ್ವೆ ನಂ. 80/1 ರ ಉತ್ತರಕ್ಕೆ ನನ್ನ ಮೈದುನ ಜಟ್ಟಪ್ಪ ಶನಿಯಾರ ನಾಯ್ಕ ರವರ ಜಾಗ ಇರುತ್ತದೆ. ಸದ್ರಿಯವರ ಜಾಗದ ಸರ್ವೆ ನಂ. ಬೇರೆಯಾಗಿರುತ್ತದೆ. ನನ್ನ ಜಾಗದ ದಕ್ಷಿಣಕ್ಕೆ ಜಟ್ಟು ಜಟ್ಟ ನಾಯ್ಕ ರವರಿಗೆ ಸೇರಿದ ಜಾಗ ಇರುತ್ತದೆ, ಅದರ ಸರ್ವೆ ನಂ. ಗೊತ್ತಿಲ್ಲ. ಸದ್ರಿ ಸರ್ವೆ ನಂ. ನಮ್ಮ ಜಾಗದ ಸರ್ವೆ ನಂಬರಿನ ಯಾವುದೇ ಹಿಸ್ಸಾದಲ್ಲಿ ಬರುವುದಿಲ್ಲ. ನನ್ನ ಜಾಗದ ಪೂರ್ವಕ್ಕೆ ಸಣ್ಣಿ ಈರಪ್ಪ ನಾಯ್ಕರವರ ಜಾಗ ಇರುತ್ತದೆ. ಅವರ ಜಾಗದ ಸರ್ವೆ ನಂ. ನನ್ನ ಜಾಗದ ಸರ್ವೆ ನಂ. ನ ಯಾವುದೇ ಹಿಸ್ಸಾದಲ್ಲಿ ಬರುವುದಿಲ್ಲ. ನನ್ನ ಜಾಗದ ಪಶ್ಚಿಮ ದಿಕ್ಕಿಗೆ ಸರ್ವೆ ನಂ. 76 ರ ಜಾಗ ಇರುತ್ತದೆ, ಅದರ ಹಿಸ್ಸೆ ಗೊತ್ತಿಲ್ಲ. ಸದ್ರಿ ಸರ್ವೆ ನಂ. 76 ರಲ್ಲಿ ಒಟ್ಟು ಎಷ್ಟು ಕ್ಷೇತ್ರ ಇದೆ ಎಂದು ಗೊತ್ತಿಲ್ಲ. ನನ್ನ ಜಾಗದ ಉತ್ತರದಲ್ಲಿರುವ ನನ್ನ ಮೈದುನನ ಜಾಗದ ಮತ್ತು ನನ್ನ ಜಾಗದ ನಡುವೆ ಪಾಗಾರ ಇರುವುದಿಲ್ಲ. ಆದರೆ ಸದ್ರಿ ಜಾಗದ ನಡುವೆ ಸರ್ವೆಗಡಿ(ಬಾಂದ್) ಇರುತ್ತದೆ. ನನ್ನ ಮತ್ತು ನನ್ನ ಮೈದುನನ ಜಾಗದ ನಡುವೆ ಯಾವುದೇ ಬೇಲಿ ಇರುವುದಿಲ್ಲ. ನನ್ನ ಮೈದುನನ ಜಾಗದ ಉತ್ತರಕ್ಕೆ ಯಾರ ಜಾಗ ಇದೆ ಎಂದು ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**